**ಇಂದು ದಿನಾಂಕಃ 28-07-2023 ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಭೊಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ. ಎಸ್.ಎನ್.ಬಿ. ವಕೀಲರಿಂದಃ-**

ನಾನು 10 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಘಟನೆ ನಡೆದ ದಿನಾಂಕಃ 11-10-2017 ರುದನೂರನಲ್ಲಿರುವ 1 ನೇ ಆರೋಪಿಯ ಮನೆಯಲ್ಲಿ ಆಗಿರುತ್ತದೆ. ಘಟನೆಯ ಬಗ್ಗೆ ಪ್ರಾಸಾ-3 ರವರ ತಂದೆ ಕರೆ ಮಾಡಿ ತಿಳಿಸಿದ್ದಾರೆ. ನಾನು ಜಿಪಿನಲ್ಲಿ ಸೇಡಂ ಆಸ್ಪತ್ರೆಗೆ ಹೋಗಿರುತ್ತೇನೆ. ಜಿಪಿನ ಸಂಖ್ಯೆ ಹಾಗೂ ಜಿಪಿನ ಚಾಲಕ ಹೆಸರು ನನಗೆ ಹೇಳಲು ಬರುವುದಿಲ್ಲ. ಜಿಪಿನ ಸಂಖ್ಯೆ ಹಾಗೂ ಜಿಪಿನ ಚಾಲಕನ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಪೊಲೀಸರಿಗೆ ನಾನು ಘಟನೆ ನಡೆದ ಎರಡು ದಿನಗಳಾದ ಮೇಲೆ ಊರಲ್ಲಿ ಹೇಳಿಕೆ ನೀಡಿದ್ದೇನೆ. ಪ್ರಾಸಾ-3 ರವರ ತಂದೆ ನನ್ನ ಗೆಳೆಯನಾದ ಕಾರಣ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರಾಸಾ-3 ಹಾಗೂ ಆರೋಪಿತರ ಮಧ್ಯ ನಡೆದ ಪಂಚಾಯತಿಯಲ್ಲಿ ನಾನು ಇದ್ದೆ. ಪಂಚಾಯತಿ ನಡೇದ ದಿನಾಂಕ ನನಗೆ ನೆನಪಿಲ್ಲ ಆದರೆ ಡಿಸೆಂಬರ 2016 ಆಗಿರುತ್ತದೆ ಎಂದು ನುಡಿಯುತ್ತಾರೆ. ಘಟನೆ ನಡೆಯುವಗಿಂತ ಮುಂಚೆ ಪಂಚಾಯಿತಿ ಆಗಿತ್ತು ಎಂದರೆ ಸರಿ. ಪಂಚಾಯತಿ ಆಗಿರುವ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಪೊಲೀಸರು ನನ್ನ ಹೇಳಿಕೆಯಲ್ಲಿ ಎನು ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ನನ್ನ ಹೇಳಿಕೆಯನ್ನು ನನಗೆ ಓದಿ ಹೇಳಿರುವ ಬಗ್ಗೆ ನನಗೆ ನೆನಪಿಲ್ಲ. ಪ್ರಾಸಾ-3 ರವರು 1 ನೇ ಆರೋಪಿಗೆ ತನ್ನ ಅತ್ತೆಗೆ ಅಡುಗೆ ಮಾಡಿ ಹಾಕದೆ ಇರುವ ಕಾರಣ 1 ನೇ ಆರೋಪಿ ಸೇಡಂನಲ್ಲಿ ಬೇರೆ ಮನೆ ಮಾಡಿರುತ್ತಾನೆ ಎಂದರೆ ಸಾಕ್ಷಿ ಬೇರೆ ಮನೆ ಮಾಡಿರುವ ಬಗ್ಗೆ ಗೊತಿದೆ ಆದರೆ ಅದರ ಕಾರಣ ಗೊತಿಲ್ಲ ಎಂದು ನುಡಿಯುತ್ತಾರೆ. ಆರೋಪಿತರು ಪ್ರಾಸಾ-3 ರವರಿಗೆ ಓಡಣಿಯಿಂದ ಉರುಲು ಹಾಕಿರುವ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

ಪ್ರಾಸಾ-3 ರವರು ತನ್ನ ಓಡಣಿಯಿಂದ ತಾನೆ ಉರುಲು ಹಾಕಿಕೂಂಡಿರುತ್ತಾಳೆ ಎಂದು ಪೊಲೀಸರಿಗೆ ನಾನು ಹೇಳಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು. ನನ್ನ ಹೇಳಿಕೆಯಲ್ಲಿರುವ ಸಂಗತಿಗಳು ಪೊಲೀಸರು ತಪ್ಪಾಗಿ ಬರೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಕೆಲವಂದು ತಪ್ಪು ಇರುತ್ತವೆ ಎಂದು ನುಡಿಯುತ್ತಾರೆ. ವರವರೋಪಚಾರದಲ್ಲಿ

ಕೊಟ್ಟಿರುವ ಬಂಗಾರ ಎಲ್ಲಿಂದ ತಂದಿರುವ ಬಗ್ಗೆ ನನಗೆ ಗೊತ್ತಿಲ್ಲ. ಬಂಗಾರ ಮತ್ತು ಹಣ ನೀಡುವ ಸಮಯಕ್ಕೆ ನಾನು ಇರಲಿಲ್ಲ. ಬಂಗಾರ ಮತ್ತು ಹಣ ನೀಡದಿದ್ದರೂ ಪ್ರಾಸಾ-3 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

ಘಟನೆ ನಡೆದ ದಿನಾಂಕ ಬಿಟ್ಟು ಬೇರೆ ದಿನ ನಾನು ರುದನೂರಗೆ ಹೋಗಿರುವುದಿಲ್ಲ. ಈ ಘಟನೆ ಸಂಬಂಧಪಟ್ಟ ಮೇಲೆ ಹೇಳಿರುವ ದಿನಾಂಕ ಬಿಟ್ಟು ಬೇರೆ ಯಾವದೇ ದಿನ ಪೊಲೀಸರು ನನಗೆ ಪೊಲೀಸ ಠಾಣೆಗೆ ಅಥವಾ ಯಾವದೇ ಸ್ಥಳಕ್ಕೆ ಕರೆಸಿರುವುದಿಲ್ಲ. ಪೊಲೀಸರು ನನ್ನಿಂದ ಯಾವದೇ ವಸ್ತುಗಳು ಪಡೆದುಕೊಂಡಿಲ್ಲ. 12 ನೇ ದಿನಾಂಕ ಬಿಟು ಪೊಲೀಸರು ನನ್ನಿಂದ ಯಾವದೇ ವಸ್ತು ಜಪ್ತಿ ಮಾಕೊಂಡಿಲ್ಲ ಎಂದರೆ ಸಾಕ್ಷಿ ಮುಂದುವರೆ ದಿನಾಂಕಃ 13-10-2017 ರಂದು ಓಡಣಿ ಜಪ್ತಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಪ್ರಾಸಾ-3 ರವರಿಂದ ಹಣ ಪಡೆದು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.ನನ್ನ ಮುಖ್ಯ ವಿಚಾರಣೆಯಲ್ಲಿರುವ ಸಂಗತಿಗಳು ಎಲ್ಲ ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**